
ಹಿಡಿದು ಕರೆತರುತ್ತದೆ. ಹಾಗೆ ಒಳಬಂದ ಮಕ್ಕಳಿಗೆ ಒಂದು ಚಂದದ ಅರ್ಥಪ್ರಪಂಚವೂ ತೆರೆದು ಕೊಳ್ಳುತ್ತವೆ.

'ಸೊಳ್ಳೆ ಸೊಳ್ಳೆ/ ಕಳ್ಳೆ ಮಿಳ್ಳೆ/ ಕೈಗೆ ಸಿಗಲೊಲ್ಲೆ' ಎಂದು ಶುರುವಾಗುವ ಪದ್ಯದಲ್ಲಿನ ಸೊಳ್ಳೆ, ಕಳ್ಳೆ ಮಿಳ್ಳೆ ಎಂಬ ಪದಗಳು ಒಂದನ್ನೊಂದು ತಟ್ಟಿಕೊಳ್ಳುತ್ತ, ಮುಟ್ಟಿಕೊಳ್ಳುತ್ತ ಸಾಲಿನಲ್ಲಿ ನಿಲ್ಲಲಾರದೇ ನಿಂತ ತಂಟೆಕೋರ ಮಕ್ಕಳ ಹಾಗೆಯೇ ಕಾಣಿಸುತ್ತವೆ. ಹೀಗೆ ಮೊದಲ ಸಾಲಿನಲ್ಲಿಯೇ ಮಕ್ಕಳ ಗಮನವನ್ನು ಹಿಡಿದಿಟ್ಟುಕೊಳ್ಳುವ ಪದ್ಯ, ಸುತ್ತಿ ಸುತ್ತಿ ಬಿಡದೇ ಕಚ್ಚಿ ಸತಾಯಿಸುವ ಸೊಳ್ಳೆಕಾಟದ ಅನುಭವವನ್ನು ಮಜವಾಗಿ ಕಟ್ಟಿಕೊಡುತ್ತದೆ. ಅನುದಿನ ಅನುಭವಿಸುವ ಸಾಧಾರಣ ಅನುಭವವೊಂದು ಕುಣಿಕುಣಿವ ಪದಗಳಲ್ಲಿ ಪದ್ಯವಾಗಿ ಸಿಕ್ಕಾಗ ಸಿಗುವ ಖುಷಿಗೆ ಮಕ್ಕಳನ್ನಷ್ಟೇ ಅಲ್ಲ, ಹಿರಿಯರ ಮನಸ್ಸಿನೊಳಗಿನ ಮಗುವನ್ನೂ ತಟ್ಟಿ ಎಬ್ಬಿಸಬಲ್ಲ ಶಕ್ತಿ ಇದೆ.

'ಆನೆ ಬರಲಿ ಊಟಕೆ / ದಿನವು ನಮ್ಮ ತೋಟಕೆ' ಎಂದು ಹೇಳುವುದು ಒಂದು ಮಗುಮನಸ್ಸಿಗೆ ಮಾತ್ರವೇ ಸಾಧ್ಯ. ಮಕ್ಕಳ ಸಾಹಿತ್ಯದಲ್ಲಿ ಪದೇ ಪದೇ ಬಳಕೆಯಾಗುವ ಮಳೆ, ನಾಯಿ, ಚಂದಮಾಮರೇ ಇಲ್ಲಿನ ಹಲವು ಪದ್ಯಗಳಲ್ಲಿ ಇವೆ. ಆದರೆ ಅವು ಹಳೆಯ ನೆನಪಿನ ಜೊತೆಗೆ ಹಲವು ಹೊಸ ಎಳೆಗಳನ್ನೂ ಜೋಡಿಸಿಕೊಂಡು ನಳನಳಿಸುತ್ತವೆ. 'ಬಾರೋ ಬಾರೋ ಮಳೆರಾಯ' ಪದ್ಯದಲ್ಲಿ 'ಟರ ಟರ ಒದರಲಿ ಕಪ್ಪೆಗಳು' ಎಂಬ ತುಸು ಹಳತೆನಿಸುವ ಸಾಲಿನೊಟ್ಟಿಗೆ 'ಸದ್ದಿಡಲೀ ಟೀ ಕಪ್ಪುಗಳು' ಎಂಬೊಂದು ಸಾಲು ಸೇರಿಸುವ ಮೂಲಕ ತಾಜಾತನವನ್ನು ಕೊಟ್ಟುಬಿಡುತ್ತಾರೆ. ಇನ್ನೊಂದು ಪದ್ಯದಲ್ಲಿ ಬ್ಯಾಗೇರಿಸಿಕೊಂಡು ಸ್ಕೂಲಿಗೆ ಬಂದುಬಿಡುವ ಅದೇ ಹಳೆಯ ಚಂದಮಾಮ, 'ಐಯ್ಯಾಮ್ ವೆರಿ ಸಾರಿ!' ಎಂದು ಹೊರಟುಬಿಡುವ ಮೂಲಕವೇ ಅರೆ ಇವನು ಹೊಸ ಚಂದ್ರಮ ಅನಿಸಿ ಬಿಡುತ್ತಾನೆ.

'ಹೋಂ ವರ್ಕ್' ಪದ್ಯವು ಹೋಂ ವರ್ಕ್‌ನ ವ್ಯಾಪ್ತಿಯನ್ನು ಪಠ್ಯದ ಚೌಕಟ್ಟಿನಿಂದ ಬಿಡಿಸಿ ಬದುಕಿನ ಕಲಿಕೆಗೆ ಹಿಗ್ಗಿಸುವ ಕೆಲಸವನ್ನು ಮೋಜಿನಿಂದಲೇ ಮಾಡುತ್ತದೆ. 'ಹೋಂ ವರ್ಕ್, ಹೋಂ ವರ್ಕ್/ ಏನ್ಮಾಡೋದು?/ ಕಸಾ ಗುಡ್ಸಿ ಮನೇನೆಲ್ಲಾ/ ಸ್ವಚ್ಛ




ಬಿಸಿ ಬಿಸಿ ಬಾತು
ಲೇ: ರಾಜಶೇಖರ ಕುಕ್ಕುಂದಾ
ಪು: 64; ಬೆ: ರೂ. 90
ಪ್ರ: ಅವ್ಯಕ್ತ ಪ್ರಕಾಶನ, ಬೆಂಗಳೂರು
ಮೊಬೈಲ್: 8792693438

ಇಡೋದು!' ಎಂದು ಶುರುವಾಗುವ ಈ ಪದ್ಯ ಹಿತ್ತಿಲ ಗಿಡಕ್ಕೆ ನೀರು ಬಿಡುವುದು, ಎಣ್ಣೆ ಹಚ್ಚಿ ಹೆಂಚಿನ ಮೇಲೆ ದೋಸೆ ಹೊಯ್ಯುವುದು, ಉಳ್ಳಾಗಡ್ಡಿ ಕತ್ತರಿಸಿಟ್ಟು ಚಟ್ನಿ ಮಾಡೋದು, ಕದ್ದು ಉಂಡೆ ತಿನ್ನುವುದು, ಅಜ್ಜ -ಅಜ್ಜೀನ ಗೋಳಾಡಿಸುವುದು ಎಲ್ಲವನ್ನೂ 'ಹೋಂ ವರ್ಕ್'ನ ವ್ಯಾಪ್ತಿಗೇ ತಂದುಬಿಡುತ್ತದೆ!

ಮಗುಸಹಜವಾದ ವಿಶಿಷ್ಟನೋಟದ ವ್ಯಂಗ್ಯವೂ ಸೇರಿಕೊಂಡರೆ 'ಹೀಗೊಂದೂರು' ಥರದ ಪದ್ಯಗಳು ಹುಟ್ಟಿಕೊಳ್ಳುತ್ತದೆ. ಆ ಪುಟಾಣಿ ಪದ್ಯ ಹೀಗಿದೆ:

**'ಹೀಗೊಂದೂರು**
**ಊರಾಗೊಂದೋಣಿ**
**ಓಣ್ಯಾಗೊಂದ್ ಮನಿ**
**ಮನ್ಯಾಗೆರಡ್ ನಾಯಿ**
**ಎರಡೂ ನಾಯಿ ಬಾಯಿ ಮುಚ್ಕೊಂಡಿದ್ವು**
**ಮನಿ ಮಂದಿಯೆಲ್ಲಾ ಜಗಳಾಡ್ತಿದ್ವು...'**

ಈ ಪದ್ಯಕ್ಕೆ ಕಲಾವಿದನ ವಕ್ರದೃಷ್ಟಿಯೂ ಸೇರಿ